**<u>ಓ.ಎಸ್. ನಂ. 403/2018          ಪಿ.ಡಬ್ಲೂ-1          ಹೆಸರು -  ಶಿವಮೂರ್ತಿ</u>**

**ಸಾಕ್ಷಿಯನ್ನು ದಿನಾಂಕಃ 21/07/2022 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ನಾನು ಸಾಕ್ಷ್ಯಕ್ಕಾಗಿ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ನನಗೆ ತಿಳಿದಿವೆ ಮತ್ತು ಅವು ಸತ್ಯವಾಗಿವೆ. ಪ್ರಮಾಣ ಪತ್ರದಲ್ಲಿ ಇರುವ ರುಜುಗಳು ನನ್ನದೇ ಆಗಿರುತ್ತವೆ.

**<u>ಮುಖ್ಯ ವಿಚಾರಣೆ   ವಾದಿ ಪರ  ವಕೀಲರಿಂದಃ-</u>**

ದಾವಾ ಸ್ವತ್ತಿಗೆ ಸಂಬಂಧಪಟ್ಟ ಹಕ್ಕು ಪತ್ರವನ್ನು ಹಾಜರುಪಡಿಸಿದ್ದೇನೆ ಅದನ್ನು ನಿಪಿ-1 ಎಂದು ಗುರುತಿಸಲಾಯಿತು. 2 ಕಂದಾಯ ಪಾವತಿ ರಶೀದಿಗಳನ್ನು ಹಾಜರುಪಡಿಸಿದ್ದೇನೆ ಅವುಗಳನ್ನು ಕ್ರಮವಾಗಿ ನಿಪಿ-2 ಮತ್ತು ನಿಪಿ-3 ಎಂದು ಗುರುತಿಸಲಾಯಿತು. ಬದನವಾಳು ಗ್ರಾಮ ಪಂಚಾಯಿತಿ ಯವರು ನೀಡಿರುವ ದಿನಾಂಕ 26.06.2018 ರ ಹಿಂಬರಹವನ್ನು ಹಾಜರುಪಡಿಸಿದ್ದೇನೆ ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಬದನವಾಳು ಗ್ರಾಮ ಪಂಚಾಯಿತಿಗೆ ದಿನಾಂಕ 03.03.2018 ರಂದು ನೀಡಿದ್ದ ಅರ್ಜಿಯ ನಕಲನ್ನು ಹಾಜರುಪಡಿಸಿದ್ದೇನೆ ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ತಾಲ್ಲೂಕು ಪಂಚಾಯಿತಿ ಕರ್ಯನಿರ್ವಾಹಕ ಅಧಿಕಾರಿಗಳಿಗೆ ದಿನಾಂಕ 19.06.2018 ರಂದು ನೀಡಿದ್ದ ಅರ್ಜಿಯ ನಕಲನ್ನು ಹಾಜರುಪಡಿಸಿದ್ದೇನೆ ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯಿತಿ ಯವರ ತಾತ್ಕಲಿಕ ತಡೆಯಾಜ್ಞೆಯ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದೇನೆ ಅದನ್ನು ನಿಪಿ-7 ಎಂದು ಗುರುತಿಸಲಾಯಿತು. ನನ್ನ ತಾಯಿ ಸಿದ್ದಮ್ಮ ಮತ್ತು ತಂದೆ ಚಿಕ್ಕೇಗೌಡರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ ಅವುಗಳನ್ನು ಕ್ರಮವಾಗಿ ನಿಪಿ-8 ಮತ್ತು ನಿಪಿ-9 ಎಂದು ಗುರುತಿಸಲಾಯಿತು.

<u>( ಪಾಟೀ ಸವಾಲಿಗೆ ಸಮಯ ಕೋರಿದ್ದು,  ಸಮಯ ನೀಡಲಾಯಿತು.)</u>

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**